sdmimd

# Kannada Prabha

Date: 23-01-2021 Page No: 03

Edition: Mysore Language: Kannada

## ಇಎಫ್‌ಎಮ್ಡಿ ಗ್ಲೋಬ್‌ನಿಂದ ಡಾ.ಎನ್.ಆರ್. ಪರಶುರಾಮನ್ ಗುರುತು

**ಮೈಸೂರು :** ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ ಸಂಸ್ಥೆ ನಿರ್ದೇಶಕ ಡಾ. ಎನ್.ಆರ್. ಪರಶುರಾಮನ್‌ಗೆ ಕೋವಿಡ್- 19 ಪಿಡುಗಿನ ವೇಳೆ ನಿರ್ವಹಣಾ ಶಿಕ್ಷಣಕ್ಕೆ ಅವರು ನೀಡಿದ ಕೊಡುಗೆ ಮತ್ತು ಅದರ ಕುರಿತು ಬದ್ಧತೆ ಪರಿಗಣಿಸಿ, ಗುರುತು ಪ್ರಮಾಣ ಪತ್ರ ನೀಡಲಾಗಿದೆ. ಬೋಧನೆ ಮತ್ತು ಕಲಿಕೆಗಾಗಿ ಅವರು ತಂತ್ರಜ್ಞಾನದ ಬಳಕೆ ಮಾಡುವುದರ ಜೊತೆಗೆ ಶೈಕ್ಷಣಿಕ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸಿದಿದ್ದನ್ನು ಯುರೋಪಿಯನ್ ಫೌಂಡೇಷನ್ ಗ್ಲೋಬಲ್ ಗುರುತಿಸಿದೆ. ಕೆಲವು ವರ್ಷಗಳಿಂದ ಜಾಗತೀಕರಣ, ಅಂತಾರಾಷ್ಟ್ರೀಯ ಮಾನ್ಯತೆ ಹಾಗೂ ಗುಣಮಟ್ಟ ಸುಧಾರಣಾ ಪ್ರಕ್ರಿಯೆ ಬಗ್ಗೆ ಹೆಚ್ಚು ಒತ್ತು ನೀಡುವ ಮೂಲಕ ಎಸ್ಡಿಎಂ ಐಎಂಡಿ ಸಂಸ್ಥೆಯು ಕ್ಷಿಪ್ರ ಪ್ರಗತಿಸಾಧಿಸುವಲ್ಲಿ ಯಶಸ್ವಿಯಾಗಿದೆ. ಕಾರ್ಯಕ್ರಮದ ಸರ್ವತೋಮುಖ ಅಭಿವೃದ್ಧಿಯಿಂದ ಎಸ್ಡಿಎಂ ಐಎಂಡಿ ಸಂಸ್ಥೆಯು ತನ್ನ ಎಲ್ಲಾ ವಿದ್ಯಾರ್ಥಿಗಳಿಗೆ ಒಳ್ಳೆಯ ಉದ್ಯೋಗಾವಕಾಶ ಒದಗಿಸಿದೆ. ಸಭೆ ನಡೆಸಲು ಪರಿಶೀಲನೆ ಭೇಟಿ ನಡೆಸಲು ಮತ್ತು ಸಮ್ಮೇಳನ ಮುಂತಾದ ಶೈಕ್ಷಣಿಕ ಕಾರ್ಯಕ್ರಮಗಳನ್ನು ಆಯೋಜಿ ಸಲು ಪರಿಣಾಮಕಾರಿ ಸಾಧನ ಅಳವಡಿಸಿಕೊಂಡಿದೆ ಎಂದರು.

